**ದಿನಾಂಕ 28.01.2021 ರಂದು ಕಲಬುರಗಿ ನಗರದ ಇಬ್ಬರು ಒಳಚರಂಡಿ ವಿಭಾಗದಲ್ಲಿ ಹೊರಗುತ್ತಿಗೆ ಕಾರ್ಮಿಕರನ್ನು ಬಲವಂತವಾಗಿ ಒಳಚರಂಡಿಗೆ ಇಳಿಸಿ ಉಸಿರುಗಟ್ಟಿಸಿ ಸಾಹಿಸಿದ ಘಟನೆ ಕುರಿತು ನಡೆಸಿದ ಸತ್ಯಶೋದನಾ ವರದಿ**

ಸತ್ಯಶೋದನ ತಂಡವನ್ನು ಸಫಾಯಿಕರ್ಮಚಾರಿ ಕಾವಲು ಸಮಿತಿ–ಕರ್ನಾಟಕ ಅಯೋಜಿಸಿತ್ತು, ತಂಡದಲ್ಲಿ ಸಹಬಾಗಿದಾರರಾಗಿ

- ಶ್ರೀ.ಮಸ್ತಾನ್ ಬಿರಾದರ್, ಸಹಾರ ಸಂಸ್ಥೆ–ಕಲಬುರಗಿ,
- ಡಾ ಚಂದ್ರಶೇಖರ್, ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು,
- ರಾಮಚಂದ್ರ, ಸಮಾನತೆ ಯನಿಯನ್, ಹೊಸಪೇಟೆ,
- ಶರಣು ಹತನೂರು, ಕಲಬುರಗಿ ಮಹಾನಗರ ಪಾಲಿಕೆ,
- ಅನಿಲ್ ಚಕ್ರ, ವಿಜಿಲೇನ್ಸ್ ಕಮಿಟಿ ಮೆಂಬರ್,ಕಲಬುರಗಿ,
- ಡಾ ದೀಲಿಪ್ ನವಾಲೆ, ಸಮುದಾಯದ ಮುಖಂಡರು,
- ಶ್ರೀ ಧರ್ಮಣ ಕೊಣೆಕರ್, ವಕೀಲರು, ಕಲಬುರಗಿ,
- ರೇಣುಕಾ, ಸ್ಲಂ ಜನಾಂದೋಲನ ಸಂಘಟನೆ, ಕಲಬುರಗಿ,
- ಡಾ ಕೆ ಬಿ ಓಬಳೇಶ, ಸಫಾಯಿಕರ್ಮಚಾರಿ ಕಾವಲು ಸಮಿತಿ–ಕರ್ನಾಟಕ, ಬೆಂಗಳೂರು,
- ರಾಜಕುಮಾರ್, ವಿಭಾಗೀಯ ಸಂಚಾಲಕರು ಸಫಾಯಿಕರ್ಮಚಾರಿ ಅಂದೋಲನ, ಕಲಬುರಗಿ,



ಕೃತ್ಯ ನಡೆದ ಸ್ಥಳ: ಕೈಲಾಸ್ ನಗರ ಮತ್ತು ಮಹಾಲಕ್ಷ್ಮಿ ನಗರದ ಮದ್ಯ
ರಾಘವೇಂದ್ರನಗರ ಪೋಲಿಸ್ ಠಾಣೆ, ಕಲಬುರಗಿ ಉಪವಿಭಾಗ,

**ಘಟನೆಯ ವಿವರ**: ದಿನಾಂಕ 28.01.21 ರಂದು ಮದ್ಯಾನ ಸುಮಾರು 1.00 ರಿಂದ 2.00 ಗಂಟೆ ಮದ್ಯದಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದಲ್ಲಿ ಗುತ್ತಿಗೆ ಅದಾರದ ಮೇಲೆ ಒಳಚರಂಡಿ ಸ್ವಚ್ಚತಗರರಾಗಿ ಕೆಲಸ ಮಾಡುತ್ತೀರುವ ಕಲಬುರಗಿ ನಗರದ

ಅಜಾ ದ್ ಪುರ್ ರಸ್ತೆ, ಉಮಾರ್ ಕಾಲೋನಿಯ ವಾಸಿಗಳಾದ  ರಶೀದ್ (34 ವರ್ಷ), ಲಾಲ್ ಅಹಮದ್(36 ವರ್ಷ) ರಾಜ್ ಅಹ್ಮದ್ (23ವರ್ಷ) ತೀವ್ರ ಗಾಯಗೊಂಡವರು,

ಅಂದು ಮದ್ಯಾನ ಎಂದಿನಂತೆ ಈ ಕಾರ್ಮಿಕರು ಸಾರ್ವಜನಿಕರ ದೂರುಗಳ ಮೆರೆಗೆ  ಒಳರೆಂಡಿಗಳ ಸ್ವಚ್ಚತೆ  ಮಾಡುವಾಗ ರಾಘವೇಂದ್ರ ಕಾಲೋನಿಯ ಹಳೆ ಒಳಚರೆಂಡಿ ಬ್ಲಾಕ್ ಅಗಿರುವುದನ್ನು **ಗುತ್ತಿಗೆದಾರ ರಸೀದ್** ಈ ಕಾರ್ಮಿಕರಿಗೆ ತೋರಿಸಿ ಒಳಗಡೆಯಿಂದ ಸ್ವಚ್ಚಮಾಡಲು ಅಧೇಶಿಸಿದ್ದಾರೆ, ಅದರೆ ಸ್ವಚ್ಚಮಾಡಿಸಲು ಯಾವುದೇ ರೀತಿಯ ಸುರಕ್ಷಿತ ಸಲಕರಣೆಗಳು ಹಾಗೂ ಜಾಗೃತಿ ಸೂಚನೆಗಳನ್ನ ನೀಡಿರಲಿಲ್ಲ, ಮತ್ತು ಈ ಒಳಚರೆಂಡಿಯು ಸುಮಾರು 12 ಅಡಿಗಳ ಹಾಳವಿದ್ದು  ಗುತ್ತಿಗೆದಾರ ಇದರ ಮಾಹಿತಿಯನ್ನು ಸಹ ಕೋಟ್ಟಿರಲಿಲ್ಲ, ಅದರೆ  ಮೊದಲಿಗೆ **ರಶೀದ್** ಒಳಚರೆಂಡಿ ಕಾರ್ಮಿಕರು ಅವರ ಸೂಚನೆಯಂತೆ ಮ್ಯಾನ್ ಹೊಲ್‌ಗೆ ಇಳಿದು ದಬ್ಬೆಯಿಂದ ಬ್ಲಾಕ್ ಹೊಡೆಯಲು ಪ್ರಯತ್ನಿಸಿದ್ದಾರೆ,  ಬ್ಲಾಕ್ ಅಗಿದ್ದ ಮ್ಯಾನ್ಹೊಲ್ ತೆರೆದುಕೊಂಡು ಒಳಗಡೆಯಿಂದ ಮಲ-ಮುತ್ರ  ರಬಸವಾಗಿ ಬಂದು **ರಶೀದ್** ಮೂಖದ ಮೇಲೆ ಬಿದ್ದು ಉಸಿರುಗಟ್ಟಿಸಿದೆ ತಕ್ಷಣ ಅವರು ಮುರ್ಛೆ ತಪ್ಪಿ ಅದೆ ಮ್ಯಾನ್‌ಹೊಲ್ ಬಿದ್ದಿದ್ದಾರೆ, ಅವರನ್ನು ರಕ್ಷೀಸಲು ಅವರ ಸಹೋದರ **ಲಾಲ್ ಮಹಾಮದ್** ಮ್ಯಾನ್ಹೊಲ್ ಹೋಗಿದ್ದಾರೆ ಅವರು ಸಹ ಕ್ಷಣಮಾತ್ರದಲ್ಲಿ ಜ್ಞಾನ ತಪ್ಪಿಬಿದ್ದಿದ್ದಾರೆ, ಇವರನ್ನು ಕೈ ಹಿಡಿದು ಮೇಲೆ ಎಳೆಯಲು ಅವರ ಇನ್ನೋಬ್ಬ ಸಹೋದರ **23 ವರ್ಷದ ರಾಜ ಮೊಹಮದ್** ಬಂದು ಇಬ್ಬರನ್ನು ಮೇಲೆ ಹಿಡಿದು ಎತ್ತಲು ಪ್ರಯತ್ನಿಸುವಾಗ ಅತನು ಸಹ ಉಸಿರುಗಟ್ಟಿ ಜ್ಞಾನ ತಪ್ಪಿದ್ದಾನೆ, ಇತನ ಕಿರುಚಾಟ ಕಂಡ ಅಲ್ಲಿದ್ದ ಸಾರ್ವಜನಿಕರು ಬಂದು ಮೇಲೆ ಎಳೆದು ಹಾಕಿದ್ದಾರೆ, ನಂತರ ಅಗ್ನಿಶಾಮಕ ಸೇವೆಗೆ ಕರೆ ಮಾಡಿದ್ದು, ಅಗ್ನಿ ಶಾಮಕ ಸೇವೆಯಾವರು ಬಂದು ಪರಿಶೀಲಿಸಿದಾಗ ಗೋತ್ತಾಗಿದ್ದು ಸದರಿ ಮ್ಯಾನ್‌ಹೊಲ್ ಸುಮಾರು 12 ಅಡಿ ಹಾಳವಿದೆ, ಒಳಗಡೆ ಸತ್ತು ಬಿದ್ದಿರುವ ಶವಗಳನ್ನು ಹೊರ ತೆಗೆಯಲು ಇಡಿ ಮ್ಯಾನ್ ಹೋಲ್‌ನ್ನೆ ಹೊಡೆದು ಪ್ರತ್ತೇಕ ಸ್ಥಳಮಾಡಿ ಮೃತ ದೇಹಗಳನ್ನುಹೊರತೆಗೆಯಲು ಅಗ್ಗಗಳನ್ನು ಕಟ್ಟಿ ಎಳೆದು ಹೊರತೆಗೆಯಲಗಿದೆ, ಇದು ನಡೆದಿರುವ ಘಟನೆ.

**ಸತ್ಯಶೋಧನ ತಂಡ ಗಮನಿಸಿದ್ದು:**

- ಕಲಬುರಗಿ ನಗರ ನೀರು ಸರಬರಾಜು ಮತ್ತು ಒಳಚರೆಂಡಿ ವಿಭಾಗದಲ್ಲಿ ಹೊರಗುತ್ತಿಗೆ ಅದಾರದಲ್ಲಿ ಒಳಚರೆಂಡಿಗಳನ್ನು ಸ್ವಚ್ಚಮಡಲು **"ಶೇಖ್ ಮೇಥಾರ್"** ಎಂಬ ಮುಸ್ಲಿಂ ಸಮುದಯದ ಯುವಕರು ಅಹವಾರು ವರ್ಷಗಳಿಂದ ದುಡಿಯುತ್ತೀದ್ದಾರೆ, ಈ ಸಮುದಾಯ ಮುಸ್ಲಿಂಮರಲ್ಲೆ ಅತಿ ಬಡವರು ಮತ್ತು ಶೋಷಿತರು ಹಾಗೂ ಮೂಲತಃ ದಲಿತರಾಗಿದ್ದವರು,
- ಇವರೇಲ್ಲಾರು ಪ್ರತಿನಿತ್ಯ ನಗರದ ಮ್ಯಾನ್ ಹೊಲ್ಸ್ , ಫಿಟ್ಟುಂಡಿ, ಸೆಪ್ಟಿಕ್ ಟ್ಯಾಂಕ್‌ಗಳ ಮಲ-ಮೂತ್ರ ಸ್ವಚ್ಚ ಮಾಡುತ್ತಿದ್ದಾರೆ,
- ಗುಲ್ಬರ್ಗ ನಗರದ ಡಾ.ಅಂಭೇಡ್ಕರ್ ನಗರ, ಗಾಜೀಪುರ ಪ್ರದೇಶಗಳಲ್ಲಿ ನೂರಾರು ಮಲಬಾಚುವ ಕಾರ್ಮಿಕರು ಮಲದ ಗುಂಡಿಗಳನ್ನು ಸ್ವಚ್ಚ ಮಾಡಿಕೊಂಡು ಜೀವನ ನಡೆಸುತ್ತೀದ್ದಾರೆ,
- ಒಳಚರೆಂಡಿ ಸ್ವಚ್ಚತೆಯ ಗುತ್ತಿಗೆಯು ಮುಸ್ಲಿಂ ಸಮುದಾಯದ ಗುತ್ತಿಗೆದಾರ ತೆಗೆದುಕೊಂಡಿದ್ದಾನೆ, ಈತ 27 ಜನ ಮುಸ್ಲಿಂ ಸಮುದಾಯದ  ಕಾರ್ಮಿಕರಿಗೆ 11 ತಿಂಗಳಿಂದ ಕನಿಷ್ಠ ವೇತನ ನೀಡಿರುವುದಿಲ್ಲ, ಭವಿಶ್ಯನಿಧಿ, ಇ ಎಸ್ ಐ ನಂತಹ ಸೌಲಭ್ಯಗಳು ಸರ್ಕಾರ ಒದಗಿಸಿದ್ದರು ಈ ತ

ಯಾವುದನ್ನು ನೀಡುವುದಿಲ್ಲ, ಇದೇಲ್ಲಾವು ಒಳಚರೆಂಡಿ ಮಂಡಳಿ ಅಧಿಕರಿಗಳ ಅಧೀನದಲ್ಲಿಯೇ ನಡೆಯುತ್ತೀರುತ್ತೆ, ಈ ಪ್ರಕ್ರಿಯೆಯಲ್ಲಿ ಲಕ್ಷಾಂತರ ರೂಪಾಯಿಗಳ ಭ್ರಷ್ಟಚಾರ ವೇಸಗಿದ್ದಾರೆ,

- ಗುತ್ತಿಗೆದಾರ ರಶೀದ್ **ಮಲಬಾಚುವ ವೃತ್ತಿಯಲ್ಲಿ ನೇಮಕ ನಿಷೇಧ ಹಗೂ ಆವರ ಪುನರ್ವಸತಿ ಕಾಯ್ಧೆ 2013** ನ್ನು ಸಂಪೂರ್ಣವಾಗಿ ಉಲ್ಲಂಘಿಸಿದ್ದಾನೆ,
- ಗುಲ್ಬರ್ಗ ನಗರವು ವ್ಯಾಪಕವಾಗಿ ಬೆಳೆದಿದ್ದು ನಗರದ ಹೋರವಲಯದಲ್ಲಿ ನಿರ್ಮಾಣವಾಗುತ್ತಿರುವ ವಸತಿ ಸಮುಚ್ಚಾಯಗಳು, ಒಂಟಿ ಮನೆಗಳು ಖಾಸಗಿ ಕ್ಷೇತ್ರದ ವಾಣಿಜ್ಯ ಸಂಕೀರ್ಣಗಳು ಅವರದ್ದೆ ಅದ ಸ್ಯಾನಿಟರಿ(ಫಿಟ್ಟುಂಡಿ, ಸೆಪ್ಟಿಕ್ ಟ್ಯಾಂಕ್) ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ, ಅವುಗಳಲ್ಲಿ ಹಲವು ಕಾನೂನು ಬಾಹೀರ, ಇವುಗಳನ್ನು 2013 ಕಾನೂನು ಪ್ರಕಾರ ಇನ್ಸ್ಯಾನಿಟರಿ ಲೆಟ್ರೀನ್ ಗಳನ್ನು ಪತ್ತೆ ಹಚ್ಚುವುದು, ಇನ್ಸ್ಯಾನಿಟರಿ ಲ್ಯಾಟ್ರೀನ್ ಗಳನ್ನು ನಿರ್ಮಿಸುವವರು ಮತ್ತು ನಿರ್ವಹಣೆ ಮಾಡುವವರಿಗೆ ನೊಟೀಸ್ ನೀಡಬೇಕಾಗಿದೆ, ಅದರೆ ಮಹಾನಗರ ಪಾಲಿಕೆ ಈ ಕೆಲಸ ಮಾಡಿಲ್ಲ,
- ಒಳಚರೆಂಡಿ ಮಂಡಳಿಯ ಅಭಿಯಂತರರು ಮತ್ತು ಗುತ್ತಿಗೆದಾರರು ಶಾಮೀಲಾಗಿ ಈ ಘಟನೆಯನ್ನು ದಾರಿತಪ್ಪಿಸಿದ್ದಾರೆ, ಅದ್ದರಿಂದಲೆ ಇದುವರೆವಿಗೂ ಮ್ಯಾನ್‌ಹೊಲ್‌ಗೆ ಇಳಿಸಿ ಇಬ್ಬರು ಆಮಾಯಕ ಕೂಲಿ ಕಾರ್ಮಿಕರನ್ನು ಕೊಲೆ ಮಾಡಿರುವ ಅಭಿಯಂತರರು, ಗುತ್ತಿಗೆದಾರರನ್ನು ಇದೂವರೆವಿಗೂ ಬಂದಿಸಿಲ್ಲ, ಅನೇಕ ಅನುಮಾನಗಳಿಂದ ಕೂಡಿದೆ,
- ಇಬ್ಬರು ಒಳಚರೆಂಡಿ ಮಂಡಳಿ ಕಾರ್ಮಿಕರು ಮ್ಯಾನ್ ಹೊಲ್ ನಲ್ಲಿ ಉಸಿರುಗಟ್ಟಿ ಸತ್ತೀದ್ದು, ರಾಜ್ಯದಾದ್ಯಂತ ಸುದ್ದಿಯಾಗಿದ್ದರು ಕಲಬುರಗಿ ಜಿಲ್ಲೆ ಜಿಲ್ಲಾಧಿಕಾರಿಗಳು ಕನಿಷ್ಠ ಸೌಜನ್ಯಕ್ಕಾದರು ಘಟನೆ ನಡೆದ ಸ್ಥಳಕ್ಕೆ ಬಂದು ವಿಕ್ಷೀಸಿಲ್ಲ, ಇದೂ ಅಕ್ಷಮ್ಯ ತಾರತಮ್ಯ ಮತ್ತು ಮುಸ್ಲಿಂ ಹಾಗೂ ಬಡವರ ಬಗ್ಗೆ ತೊರುವ ತಾರತಮ್ಯ.

**ಶಿಫಾರಸ್ಸುಗಳು:**

- ಕಲಬುರಗಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆ ಅಯುಕ್ತರ ಹಾಗೂ ಒಳಚರೆಂಡಿ ಮಂಡಳಿಯ ಮುಖ್ಯಾಧಿಕಾರಿಗಳನ್ನು ಪಿ ಇ ಎಂ ಎಸ್ ಅರ್ ಕಾಯ್ಧೆ 2013 ಸೆಕ್ಷನ್ 8,9 ಮತ್ತು ಐಪಿಸಿ ಸೆಕ್ಷನ್ 304ಎ/ಬಾಗ 2 ರಲ್ಲಿ ಎಫ್ ಐ ಅರ್ ನೊಂದಾಯಿಸಬೇಕು ಮತ್ತು ಬಂಧಿಸಬೇಕು,
- ಈ ಘಟನೆ ಮದ್ಯಾನ 1.30 ಕ್ಕೆ ನಡೆದಿದೆ ಅದರೆ ಪೋಲಿಸರು ತಕ್ಷಣ ದೂರು ದಾಖಲಿಸದೆ ತಡ ಮಾಡಿದ್ದು ಹಾಗೂ ರಾತ್ರಿ ಸುಮಾರು 11.00ಗಂಟೆಯಾದರು ದೂರು ದಾಳಕಿಸಲು ಸತಾಹಿಸಿದ್ದು, ಕೊನೆಗೆ ಅನುಮಾನಿತ/ಅಪಾಧಿತ ವ್ಯಕ್ತಿಗಳ ಹೆಸರು ಮತ್ತು ಹುದ್ದೆಗಳನ್ನು ತಪ್ಪಾಗಿ ನಮೂದಿಸಿ ಮುಂದಿನ ದಿನಗಳಲ್ಲಿ ನ್ಯಾಯಲಾಯದಲ್ಲಿ ಈ ಕೇಸು ದುರ್ಬಲಗೊಳ್ಳಲು ಪ್ರಯತ್ನಿಸಿರುವ ರಾಘವೆಂದ್ರನಗರ ಪೋಲಿಸ್ ಠಾಣೆ ಇನ್ಸ್‌ಪೇಕ್ಟರ್ ಹಾಗೂ ಪೋಲಿಸ್ ಮೇಲಾಧಿಕಾರಿಗಳ ಮೇಲೆ ದೂರು ದಾಖಲಾಗಬೇಕು,
- ಮೃತ 2 ಕುಟುಂಬಗಳು ಮತ್ತು ಅದೇ ಪ್ರದೇಶದಲ್ಲಿ ಒಳಚರೆಂಡಿ ಸ್ವಚ್ಚ ಕೆಲಸ ಮಡುತ್ತೀರುವ ಸುಮಾರು 150 ಕುಟುಂಬಗಳನ್ನು ಪಿ ಇ ಎಂ ಎಸ್ ಅರ್ ಕಾಯ್ಧೆಯಂತೆ ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ಎಂದು ನೊಂದಾಯಿಸಿ ಗುರುತಿನ ಚೀಟಿ ನೀಡಬೇಕು,

- ಮೃತ 2 ಕುಟುಂಬಗಳಿಗೆ ಪಿ ಇ ಎಂ ಎಸ್ ಅರ್ ಕಾಯ್ದೆ 2013 ಸೆಕ್ಷನ್ 13 ರಂತೆ ಸಮಗ್ರವಾದ ಪುನರ್ವಸತಿ ಯಾಗಬೇಕು, ನಿರ್ಮಾಣ ಮಾಡಿರುವ ಮನೆ, ಮೃತರ ಇಬ್ಬರು ಪತ್ನಿಯರಿಗೆ ಮಹಾನಗರಪಾಲಿಕೆಯಲ್ಲಿ ಖಾಯಂ ಕೆಲಸ, ಅವರ ಚಿಕ್ಕ ಮಕ್ಕಳಿಗೆ ಪೂರ್ಣ ಪ್ರಮಾಣದ ಶಿಕ್ಷಣ, ಅಹಾರ ಅರೋಗ್ಯ ವ್ಯವಸ್ಥೆಗಳನ್ನು ನೀಡಬೇಕು.
- ಗುಲ್ಬರ್ಗ ನಗರ ಮತ್ತು ಜಿಲ್ಲೆಯಾದ್ಯಾಂತ ಪೂರ್ಣಪ್ರಮಾಣದಲ್ಲಿ ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ಸಮೀಕ್ಷೆ ಮತ್ತು ಸ್ವ–ಘೋಷಣೆ ಅಂದೋಲನ ರೂಪಿಸಬೇಕು, ಈ ಅಂದೋಲನವನ್ನು ಸಫಾಯಿಕರ್ಮಚಾರಿ ಸಂಘ–ಸಂಸ್ಥೆಗಳ ಸಹಬಾಗಿತ್ವದಲ್ಲಿ ಮಾಡಬೇಕು
- ಪಿ ಇ ಎಂ ಎಸ್ ಅರ್ ಕಾಯ್ದೆ 2013 ರ ಅಡಿ ಜಿಲ್ಲಾಧಿಕಾರಿಗಳ ಮತ್ತು ವಿಭಾಗೀಯ ಅ ಧಿಕಾರಿಗಳ ಅದ್ಯಕ್ಷತೆಯಲ್ಲಿ ರಚಿಸಬೇಕಾಗಿರುವ ವಿಜಿಲೆನ್ಸ್ ಸಮಿತಿಗೆ  ಯಾವುದೇ ಕಾರಣಕ್ಕೂ ಇತರೇ ದಲಿತರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು, ಪ್ರಸ್ತುತ ಇರುವ ಸಮಿತಿಯನ್ನು ರದ್ದು ಪಡಿಸಬೇಕು, ಹೋಸ ಸಮಿತಿ ಸದಸ್ಯರನ್ನ ನೇಮಿಸಬೇಕು, ರಚನೆಯಾಗಲಿರುವ ಸಮಿತಿಗೆ ಹಾಲಿ ಒಳಚರೆಂಡಿ ಕಾರ್ಮಿಕರು ಮತ್ತು ಪೌರಕಾರ್ಮಿಕರನ್ನೆ ನೇಮಿಸಬೇಕು
- ಕಲಬುರಗಿ ನಗರ ಮತ್ತು ಜಿಲ್ಲೆಯಲ್ಲಿ ಒಳಚರೆಂಡಿ ಮತ್ತು ಫಿಟ್,ಸೇಪ್ಟಿಕ್ ಟ್ಯಾಂಕ್ ಗಳನ್ನು ಸ್ವಚ್ಛ ಮಾಡಲು ಅಗತ್ಯವಿರುವಷ್ಟು ಯಾಂತ್ರೋಪಕರಣಗಳನ್ನು (ಜೆಟ್ಟಿಂಗ್, ಸೆಕ್ಕಿಂಗ್, ನಂತಹ ಸಣ್ಣ ಮತ್ತು ಮದ್ಯಮ) ಒದಗಿಸಬೇಕು,
- ಕಲಬುರಗಿ ನಗರದಲ್ಲಿ ಮತ್ತು ಜಿಲ್ಲೇಯಾದ್ಯಂದ ಅನೈರ್ಮಾಲ್ಯ ಶೌಚಾಲಯಗನ್ನು ನೈರ್ಮಾಲ್ಯ ಶೌಚಲಾಯಗಳಾಗಿ  ನಿಗದಿತ ಕಾಲಘಟ್ಟದಲ್ಲೀಯೆ ಪರಿವರ್ತಿಸಬೇಕು,
- ಮಲಹೊರುವ ಪದ್ದತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ದಿ ಇಲಾಖೆ ಪೌರಾಡಳಿತ ಪೋಲಿಸ್ ಇಲಾಖೆಗಳು ಜಂಟಿ ಕಾರ್ಯಯೋಜನೆ ಮಾಡಬೇಕು ಮತ್ತು ಅನೂಷ್ಠಾನ ಮಾಡಬೇಕು,

**ವರದಿ: ಡಾ.ಕೆ.ಬಿ.ಓಬಳೇಶ**